# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2185 |
| 2. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ಎಸ್ ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸುವ ದಿನಾಂಕ | : | 26.03.2026 |
| 4. | ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಶಾಲಾ-ಕಾಲೇಜು ಆವರಣಗಳಲ್ಲಿ ಡ್ರಗ್ಸ್ ದಂಧೆ ವ್ಯಾಪಕವಾಗುತ್ತಿದ್ದು, ಅಪ್ರಾಪ್ತರು ಮಾದಕ ವ್ಯಸನಕ್ಕೆ ಬಲಿಯಾಗಿ ಅಪರಾಧ ಕೃತ್ಯಗಳಲ್ಲಿ ತೊಡಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳೇನು;</td><td>
ರಾಜ್ಯದಲ್ಲಿ ಬೆಂಗಳೂರು ನಗರ ಮತ್ತು ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ ಶಾಲಾ-ಕಾಲೇಜು ಆವರಣದಲ್ಲಿ ಡ್ರಗ್ಸ್ ದಂಧೆ ಪ್ರಕರಣಗಳು ವರದಿಯಾಗಿರುವುದಿಲ್ಲ. ಬೆಂಗಳೂರು ನಗರ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ದಾಖಲಾದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಬೆಂಗಳೂರು ನಗರ</th><th>ಬಳ್ಳಾರಿ</th></tr>
<tr><td>2023</td><td>02</td><td>02</td></tr>
<tr><td>2025</td><td>01</td><td>-</td></tr>
<tr><td>2026<br>28.02.26</td><td>01</td><td>-</td></tr>
</table>
ಅಪ್ರಾಪ್ತರು ಮಾದಕ ವ್ಯಸನಕ್ಕೆ ಬಲಿಯಾಗಿ ಅಪರಾಧ ಕೃತ್ಯಗಳಲ್ಲಿ ತೊಡಗುತ್ತಿರುವುದನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-<br>
➢ ಮಾದಕ ವಸ್ತುಗಳ ಸೇವನೆಯಿಂದ ಆಗುವಂತಹ ದುಷ್ಪರಿಣಾಮಗಳ ಬಗ್ಗೆ ಮಾಸಿಕವಾಗಿ ಅಪರಾಧ ತಡೆ ಮಾಸಾಚರಣೆ ಹಾಗೂ ಹಲವು ಕಾರ್ಯಕ್ರಮಗಳನ್ನು ಕೈಗೊಂಡು ಜಾಗೃತಿ ಮೂಡಿಸಲಾಗುತ್ತಿದೆ.
<table>
<tr><th>ವರ್ಷ</th><th>ಜಾಗೃತಿ ಕಾರ್ಯ ಕ್ರಮಗಳ ಸಂಖ್ಯೆ</th><th>ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>2023</td><td>13998</td><td>975859</td></tr>
<tr><td>2024</td><td>21852</td><td>1408172</td></tr>
<tr><td>2025</td><td>32888</td><td>2532811</td></tr>
<tr><td>2026<br>28.02.26</td><td>3270</td><td>217908</td></tr>
</table>
➢ ಮಾಸಿಕ ಜನ ಸಂಪರ್ಕ ಸಭೆಗಳಲ್ಲಿ ಪೋಷಕರುಗಳಿಗೆ ತಮ್ಮ ಮಕ್ಕಳ ಬಗ್ಗೆ ನಿಗಾವಣೆ ಇಡುವಂತೆ ಸೂಚಿಸಲಾಗಿದೆ.<br>
➢ ಶಾಲಾ-ಕಾಲೇಜುಗಳಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆಯ ಬಗ್ಗೆ ಮಾಹಿತಿ ಕಲೆ ಹಾಕಲು, ತಡೆಗಟ್ಟಲು ಆ್ಯಂಟಿ ಡ್ರಗ್ಸ್ ಕಮಿಟಿಯ ಮುಖಾಂತರ ಕ್ರಮವಹಿಸಲಾಗುತ್ತಿದೆ.<br>
➢ ಮಾದಕ ವಸ್ತುಗಳ ಸಾಗಾಣಿಕೆಯ ಮೂಲವನ್ನು ಪತ್ತೆ ಮಾಡಿ ಶಾಶ್ವತವಾಗಿ ತಡೆಯಲು ಮತ್ತು ಪೆಡ್ಲರ್ಸ್‌ಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br>
➢ ಸನ್ಮಿತ್ರ ಕಾರ್ಯಕ್ರಮದ ಮುಖಾಂತರ ಮಾದಕ ವಸ್ತುಗಳ
</td></tr>
</table>

| | | |
|---|---|---|
| | | ವ್ಯಸನಿಗಳನ್ನು ಮಾದಕ ವಸ್ತುಗಳಿಂದ ವ್ಯಸನ ಮುಕ್ತರನ್ನಾಗಿಸಲಾಗುತ್ತಿದೆ.<br>➢ ಮಾದಕ ದ್ರವ್ಯಗಳ ಅಕ್ರಮ ಸಾಗಾಣಿಕೆ, ಮಾದಕ ದ್ರವ್ಯಜಾಲದ ಕುರಿತು ಸ್ಥಳೀಯ ಬಾತ್ಮೀದಾರರು, ಅಪರಾಧ ವಿಭಾಗದ ಸಿಬ್ಬಂದಿಗಳು ಹಾಗೂ ಬೀಟ್ ಸಿಬ್ಬಂದಿಗಳಿಂದ ಮಾಹಿತಿ ಕಲೆ ಹಾಕಲಾಗುತ್ತಿದೆ. ಪೊಲೀಸ್ ಠಾಣೆಗಳಲ್ಲಿ ಮಾದಕ ದ್ರವ್ಯಗಳ ಅಕ್ರಮ ಸಾಗಾಣಿಕೆ ಬಗ್ಗೆ ವಿಶೇಷವಾಗಿ ಮಾಹಿತಿಯನ್ನು ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಮಾದಕ ವಸ್ತುಗಳನ್ನು ಬೆಳೆಯುವ ಮತ್ತು ತಯಾರಿಸುವ ಲ್ಯಾಬ್‌ಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹಾಗೂ ಸಾರ್ವಜನಿಕರಿಗೆ ಮತ್ತು ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಭೆಗಳನ್ನು ಏರ್ಪಡಿಸಿ ಮಾದಕ ವಸ್ತುಗಳಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಸೂಚಿಸಿ, ಮಾದಕ ವಸ್ತುಗಳನ್ನು ತಯಾರು ಮಾಡುವ ವ್ಯಕ್ತಿಗಳ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಠಾಣಾ ಸರಹದ್ದುಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುವುದು ಕಂಡು ಬಂದಲ್ಲಿ ಹಾಗೂ ಕಾಲೇಜುಗಳ ಬಳಿ ಸಿಬ್ಬಂದಿಗಳನ್ನು ಮಫ್ತಿಯಲ್ಲಿ ನೇಮಿಸಿ ಮಾದಕ ವಸ್ತುಗಳ ಮಾರಾಟದ ಕುರಿತು ಮಾಹಿತಿ ಸಂಗ್ರಹಿಸಿ, ಈ ಬಗ್ಗೆ ಖಚಿತ ಮಾಹಿತಿ ದೊರೆತಲ್ಲಿ ಆರೋಪಿಗಳ ವಿರುದ್ಧ ಎನ್.ಡಿ.ಪಿ.ಎಸ್, ಕಾಯ್ದೆ-1985ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗುತ್ತಿದೆ. |
| (ಆ) | ಕೇವಲ ಸಣ್ಣಪುಟ್ಟ ಪೆಡ್ಲರ್‌ಗಳನ್ನು ಹಿಡಿಯುವ ಬದಲು, ಡ್ರಗ್ಸ್ ದಂಧೆಯ ಮೂಲ (Source) ಮತ್ತು ಕಿಂಗ್‌ಪಿನ್‌ಗಳನ್ನು ಪತ್ತೆ ಹಚ್ಚುವಲ್ಲಿ ಗುಪ್ತಚರ ಇಲಾಖೆ ವೈಫಲ್ಯಕ್ಕೆ ಕಾರಣವೇನು; | ರಾಜ್ಯದಲ್ಲಿ ಮಾದಕ ವಸ್ತು ಪೆಡ್ಲರ್‌ಗಳು ಅಲ್ಲದೇ ಇನ್ನು ಡ್ರಗ್ಸ್ ದಂಧೆಯಲ್ಲಿ ತೊಡಗಿಕೊಂಡಿರುವ ಯಾರೇ ಕಿಂಗ್ ಪಿನ್ ಇದ್ದರೂ ಕೂಡಾ ಅಂತಹವರ ಮೇಲೆ ಹೆಚ್ಚಿನ ನಿಗಾವಹಿಸಿ ಅಂತಹ ಪ್ರಕರಣಗಳು ಕಂಡುಬಂದಲ್ಲಿ ಕೂಡಲೇ ಪ್ರಕರಣಗಳನ್ನು ದಾಖಲಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ. |
| (ಇ) | ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ನಗರಗಳಲ್ಲಿ ಅಪ್ರಾಪ್ತರು ಜೀವದ ಹಂಗು ತೊರೆದು 'ವೀಲಿಂಗ್' (Wheeling) ಮಾಡುವ ಮೂಲಕ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದಾರೆ; ಈ ಬಗ್ಗೆ ಕಳೆದ ಒಂದು ವರ್ಷದಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಪೋಷಕರ ವಿರುದ್ಧ ಯಾವ ಕ್ರಮಕೈಗೊಳ್ಳಲಾಗಿದೆ; | ರಾಜ್ಯದಲ್ಲಿ 2025ನೇ ಸಾಲಿನಲ್ಲಿ ಅಪ್ರಾಪ್ತರು ಜೀವದ ಹಂಗು ತೊರೆದು ವೀಲಿಂಗ್ ಮಾಡುವ ಮೂಲಕ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡಿರುವವರ ವಿರುದ್ಧ ಒಟ್ಟು 223 ಪ್ರಕರಣಗಳು ದಾಖಲಾಗಿರುತ್ತದೆ. ಅಪ್ರಾಪ್ತರ ಪೋಷಕರ/ಮಾಲೀಕರ ವಿರುದ್ಧ ಸಹ ಬಿ.ಎನ್.ಎಸ್. ಕಾಯ್ದೆ ಅಡಿ ಮತ್ತು ಐ.ಎಂ.ವಿ ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲು ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ. |
| (ಈ) | ಸಾಮಾಜಿಕ ಜಾಲತಾಣಗಳಲ್ಲಿ ವೀಡಿಯೋಗಳನ್ನು ಪ್ರಚೋದಿಸುವವರ ಮೇಲೆ ಕ್ರಮ ಕೈಗೊಳ್ಳಲು ಸೈಬರ್ ಕ್ರೈಂ | ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋಗಳನ್ನು ಪ್ರಚೋದಿಸುವವರ ಮೇಲೆ ಪ್ರಕರಣಗಳನ್ನು ದಾಖಲಿಸುವ ಕುರಿತು ರಾಜ್ಯದ ಎಲ್ಲಾ ಪೊಲೀಸ್ ಆಯುಕ್ತರು ಮತ್ತು ಪೊಲೀಸ್ ಅಧೀಕ್ಷಕರುಗಳೊಂದಿಗೆ ದಿನಾಂಕ: 07.07.2023 |

| | | |
|---|---|---|
| | ಭಾಗಕ್ಕೆ ವಿಶೇಷ ಸೂಚನೆ ನೀಡಲಾಗಿದೆಯೇ; | ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಲಾಗಿರುತ್ತದೆ. ಡಿಜಿ ಮತ್ತು ಐಜಿಪಿ ಕಛೇರಿಯ ಸುತ್ತೋಲೆ ಸಂಖ್ಯೆ: ಕಾ ಮತ್ತು ಸು/ ಮಿಶ್ರ /06/2026, ದಿನಾಂಕ: 07.02.2026ರಲ್ಲಿ ಮಾರ್ಗ ಸೂಚಿಗಳನ್ನು ನಿಗದಿಪಡಿಸಲಾಗಿರುತ್ತದೆ. |
| (ಉ) | ಕೊಲೆ ಮತ್ತು ಅತ್ಯಾಚಾರ ದಂತಹ ಗಂಭೀರ ಅಪರಾಧಗಳಲ್ಲಿ ಭಾಗಿಯಾದ ಅಪ್ರಾಪ್ತರ ಸಂಖ್ಯೆ ಹೆಚ್ಚುತ್ತಿದೆ; ಇವರನ್ನು ಇರಿಸಲಾಗುವ ಬಾಲಮಂದಿರಗಳು (Remand Homes) ಇಂದು ಅಪರಾಧಗಳ ತರಬೇತಿ ಕೇಂದ್ರಗಳಾಗಿ ಬದಲಾಗುತ್ತಿವೆ ಎಂಬ ಆರೋಪಕ್ಕೆ ಸರ್ಕಾರದ ಬಳಿ ಉತ್ತರವೇನು; | ಕೊಲೆ ಮತ್ತು ಅತ್ಯಾಚಾರದಂತಹ ಗಂಭೀರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ಅಪ್ರಾಪ್ತರು / ಕಾನೂನು ಸಂಘರ್ಷಕ್ಕೆ ಒಳಪಟ್ಟ ಅಪ್ರಾಪ್ತರ ಪ್ರಕರಣಗಳಲ್ಲಿ ಜೆ.ಜೆ. ಕಾಯ್ದೆ, 2015 ಮತ್ತು ನಿಯಮಗಳ ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.<br>ಪರಿವೀಕ್ಷಣಾಲಯಗಳಲ್ಲಿ ವಿವಿಧ ರೀತಿಯ ಔದ್ಯೋಗಿಕ ತರಬೇತಿ ಕಾರ್ಯಕ್ರಮಗಳಾದ ಯಂತ್ರಚಾಲಿತ ಹೊಲಿಗೆ, ಕಂಪ್ಯೂಟರ್, ಡ್ರೈವಿಂಗ್, ಬಟ್ಟೆ ತಯಾರಿಕೆ, ಮನೆಗೆಲಸ, ಕ್ಲೇ ಅಚ್ಚೊತ್ತುವಿಕೆ, ತೋಟಗಾರಿಕೆ, ಕೃಷಿ ಮತ್ತು ಪಶುಸಂಗೋಪನೆ ಇತ್ಯಾದಿಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ಇದರ ಪರಿಣಾಮವಾಗಿ ಮಕ್ಕಳಲ್ಲಿ ಗುಣಾತ್ಮಕ ಚಿಂತನೆಯನ್ನು ಬೆಳೆಸುವುದಕ್ಕೆ ಸಹಕಾರಿಯಾಗಿದೆ. ಇದರಿಂದ ಮಕ್ಕಳು ಸಂಸ್ಥೆಯಿಂದ ಬಿಡುಗಡೆ ಹೊಂದಿ ಸಮಾಜಕ್ಕೆ ಮರಳಿದಾಗ ಸಮಾಜದಲ್ಲಿ ಬದುಕಲು ಸಹಕಾರಿಯಾಗುತ್ತದೆ. |
| (ಊ) | ಗಂಭೀರ ಅಪರಾಧ ಎಸಗಿದ 16-18 ವರ್ಷದ ಕಿಶೋರರನ್ನು ವಯಸ್ಕರಂತೆ ಪರಿಗಣಿಸಿ ಕಾನೂನು ಕ್ರಮ ಜರುಗಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಜೆ.ಜೆ. ಬೋರ್ಡ್‌ಗಳು ಗಂಭೀರ ಅಪರಾಧ ಎಸಗಿದ 16-18 ವರ್ಷದ ಕಿಶೋರರನ್ನು / ಕಾನೂನು ಸಂಘರ್ಷಕ್ಕೆ ಒಳಪಟ್ಟ ಅಪ್ರಾಪ್ತರನ್ನು ವಯಸ್ಕರಂತೆ ಪರಿಗಣಿಸಿ ಕಲಂ 18(3) ಜೆ.ಜೆ. ಕಾಯ್ದೆ, 2015 ಮತ್ತು ನಿಯಮಗಳ ಅನ್ವಯ ಕಾನೂನು ಕ್ರಮ ಜರುಗಿಸಲು ಅವಕಾಶವಿರುತ್ತದೆ. |

ಒಇ 31 ಪಿಎನ್‌ಡಿ 2026

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು